**<u>ಸಾಕ್ಷಿಯನ್ನು ದಿಃ 09.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 7 ರಿಂದ 12 ನೇ ಪ್ರತಿವಾದಿ ಪರ ಶ್ರೀ ಬಿ.ಎಸ್.ವೈ ವಕೀಲರಿಂದಃ-</u>**

ಕರಾರು ಪತ್ರ ಬರೆದುಕೊಟ್ಟ ದಿನದ 3 ತಿಂಗಳ ಒಳಗೆ ಬರೆದುಕೊಡಬೇಕೆಂದು ಅವಧಿ ನಮೂದಿಸಲಾಗಿತ್ತು. ನಿಪಿ.1 ರ ಪ್ರಕಾರ ಕ್ರಯದ ಕರಾರಿನ ದಿಃ 22.09.2014 ಆಗಿರುತ್ತದೆ. ದಿಃ 22.09.2014 ರಿಂದ 3 ತಿಂಗಳ ಒಳಗೆ ಪತ್ರ ಬರೆದುಕೊಡುವಂತೆ ನಿಪಿ. 1 ರಲ್ಲಿ ನಮೂದು ಆಗಿರುತ್ತದೆ. ಸದರಿ 3 ತಿಂಗಳ ನಂತರವಾಗಲಿ, 2016 ರ ಒಳಗಾಗಲಿ ನೊಟೀಸು ಕೊಟ್ಟಿಲ್ಲ. ಅಗ್ರಿಮೆಂಟ್ ಆದ ನಂತರ ಪಾರ್ಟಿಶನ್ ಡೀಡ್ ಮಾಡಿಕೊಂಡಿದ್ದರು ಎಂದು ಹೇಳಿದ್ದು, ಆ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. 18 ಮತ್ತು 19 ನೇ ಪ್ರತಿವಾದಿಗಳು ಇತ್ತೀಚಿಗೆ ಖರೀದಾರರಾದ ಕಾರಣ ಅವರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಲಾಗಿದೆ. 18 ನೇ ಪ್ರತಿವಾದಿ ದಿಃ 10.03.2020 ರಂದು ಖರೀದಿ ಮಾಡಿರುತ್ತಾರೆ. 19 ನೇ ಪ್ರತಿವಾದಿ ಯಾವಾಗ ಖರೀದಿ ಮಾಡಿರುತ್ತಾರೆ ಎಂದು ದಿನಾಂಕ ನೆನಪಿಲ್ಲ ಎನ್ನುತ್ತಾರೆ. ದಾವಾ ಪತ್ರದಲ್ಲಿ ಸದರಿ ದಿನಾಂಕವನ್ನು ನಮೂದಿಸಲಾಗಿದೆ. ಆ ಬಗ್ಗೆ ಸಂಬಂಧಿಸಿದ ಖರೀದಿ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. 18 ಮತ್ತು 19 ನೆ ಪ್ರತಿವಾದಿಗಳು ಖರೀದಿ ಮಾಡಿದ ವಿಚಾರ ನನಗೆ 2021 ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ. ಹಾಗೆ ಗೊತ್ತಾದ ದಿನಾಂಕ ಹೇಳಲು ಆಗುವುದಿಲ್ಲ, ಸಾಕ್ಷಿ ಪುನಃ ಗೊತ್ತಾದ ನಂತರ ದಾವೆ ಹಾಕಲಾಗಿದೆ ಎಂದು ನುಡಿಯುತ್ತಾರೆ. ಯಾವ ದಿನಾಂಕಂದು ದೃಡೀಕೃತ ಪ್ರತಿ ತೆಗೆಯಲಾಗಿದೆ ಎಂದು ನನಗೆ ದಿನಾಂಕ ನೆನಪಿಲ್ಲ.

ದಾವಾ ಸ್ವತ್ತಿನ ಸರ್ವೆ ನಂ. 81 ಆಗಿರುತ್ತದೆ. ಈಗಿನ ಸರ್ವೆ ನಂ. 81/4 ಮತ್ತು 81/5 ಆಗಿರುತ್ತದೆ. ದಾವಾ ಹಾಕುವ ಸಮಯದಲ್ಲಿ ಸರ್ವೆ ನಂ. 81/4 ಮತ್ತು 81/5 ಆಗಿತ್ತು ಎಂದರೆ ಸರಿ. ಸದರಿ ಸರ್ವೆ ನಂಬರ್ ಗಳ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಮುಂದುವರೆದ ಕರಾರು ಪತ್ರಗಳಾದ ನಿಪಿ. 2 ರಿಂದ 4 ರ ದಾಖಲೆ ಪತ್ರಗಳನ್ನು ನಾನು ಖರೀದಿ ಮಾಡಿಲ್ಲ, ರೈತರು ಖರೀದಿಸಿರುತ್ತಾರೆ ಎನ್ನುತ್ತಾರೆ. ಚೌಡನಾಯಕ ಮತ್ತು

ಹಲಗನಾಯಕ ಎಂಬುವವರು ಖರೀದಿ ಮಾಡಿರುತ್ತಾರೆ. ಸದರಿರವರು ಪತ್ರವನ್ನು ಖರೀದಿ ಮಾಡಿದ್ದಾರೆ ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲೆ ಇಲ್ಲ. ದಾಖಲೆಯನ್ನು ಮೈಸೂರಿನಲ್ಲಿ ನೋಟರಿ ಮಾಡಿಸಲಾಗಿರುತ್ತದೆ, ಯಾವ ವಕೀಲರು ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನೋಟರಿ ವಕೀಲರ ಹತ್ತಿರ ಸದರಿ ಪತ್ರ ನೊಂದಣಿ ಆಗಿರುತ್ತದೆ. ನೋಂದಣಿ ಪತ್ರಕ್ಕೆ ನಾವೆಲ್ಲಾ ಸಹಿ ಹಾಕಿರುತ್ತೇವೆ. ಸದರಿ ನೋಟರಿ ರವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ಹೇಳಿಸಲು ನನಗೆ ಯಾವುದೆ ತೊಂದರೆ ಇಲ್ಲ. ಸದರಿ ಮುಂದುವರೆದ ಕರಾರು ಪತ್ರಗಳು ನೋಟರಿ ರವರ ಮುಂದೆ ನೊಂದಣಿ ಆಗಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೊಂದಣಿ ಆಗಿದ್ದರೆ ನೊಂದಣಿ ಸಂಖ್ಯೆ ನಮೂದು ಮಾಡಲಾಗುತ್ತಿತ್ತು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. 7 ರಿಂದ 12 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ಸಹಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಪತ್ರಗಳು ಅಂದರೆ ನಿಪಿ. 1 ರಿಂದ 4 ಪತ್ರಗಳಲ್ಲಿ 9 ರಿಂದ 12 ನೇ ಪ್ರತಿವಾದಿಗಳ ಸಹಿ ಇಲ್ಲ ಎಂದರೆ ಸಾಕ್ಷಿ ನಿಪಿ. 1 ರ ಅಗ್ರಿಮೆಂಟ್ ನಲ್ಲಿ ಅವರ ಸಹಿ ಇರುವುದಿಲ್ಲ ಎನ್ನುತ್ತಾರೆ. ನಿಪಿ. 2 ರಿಂದ 4 ರ ಮುಂದುವರೆದ ಕರಾರು ಪತ್ರಗಳಲ್ಲಿ ಅವರ ಸಹಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ. 2 ರ ದಾಖಲೆಯಲ್ಲಿ 9 ರಿಂದ 12 ನೇ ಪ್ರತಿವಾದಿಗಳ ಸಹಿ ಇಲ್ಲ ಎಂದರೆ ಸರಿ. ಅದೆ ರೀತಿ ನಿಪಿ. 3 ರಲ್ಲಿಯೂ ಕೂಡ 9 ರಿಂದ 12 ನೇ ಪ್ರತಿವಾದಿಗಳ ಸಹಿ ಇಲ್ಲ ಎಂದರೆ ಸರಿ. ನಿಪಿ. 4 ರಲ್ಲಿ 9 ಮತ್ತು 10 ನೇ ಪ್ರತಿವಾದಿಗಳ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಹಣ ಕೊಟ್ಟು ಮುಂದುವರೆದ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದರೆ ಅವರ ಸಹಿ ಮಾಡಿಸಿಕೊಳ್ಳುತ್ತಿದ್ದೆ, ನಾನು ಯಾವುದೆ ಹಣವನ್ನು ಕೊಡದಿದ್ದ ಕಾರಣ ಅವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ತೆರಿಗೆ ಪಾವತಿದಾರನಾಗಿರುತ್ತೇನೆ. ಹಣದ ವ್ಯವಹಾರವನ್ನು ಚೆಕ್ ಮೂಲಕವೆ ಮಾಡುತ್ತೇನೆ ಎಂದರೆ ಸಾಕ್ಷಿ ಮೊದಲು ನಗದು ವ್ಯವಹಾರ ಮಾಡುತ್ತಿದ್ದು, ಇತ್ತೀಚಿಗೆ ಚೆಕ್ ವ್ಯವಹಾರ ಮಾಡುತ್ತಿದ್ದೇನೆ ಎನ್ನುತ್ತಾರೆ. 2018 ರ ವರೆಗೆ ನಗದು ವ್ಯವಹಾರ ಮಾಡಿದ್ದು, 2018 ರ ನಂತರ ಚೆಕ್ ಮೂಲಕ ವ್ಯವಹಾರ

ಮಾಡುತ್ತಿದ್ದೇನೆ. ಆ ಬಗ್ಗೆ ಸರ್ಕಾರದ ಆದೇಶದ ಪ್ರತಿ ನನ್ನ ಬಳಿ ಇರುವುದಿಲ್ಲ. 2016 ರಕ್ಕೂ ಮೊದಲಿನಿಂದಲೂ ಚೆಕ್ ಮೂಲಕ ವ್ಯವಹರಿಸಬೇಕೆಂಬ ನಿಯಮ ಇತ್ತು ಎಂದರೆ ಸಾಕ್ಷಿ ರೈತರಾದ ಕಾರಣ ಅವರ ಬಳಿ ಅಕೌಂಟ್ ಇಲ್ಲವೆಂದು ನಗದು ಮೂಲಕ ವ್ಯವಹರಿಸಲಾಗಿತ್ತು ಎನ್ನುತ್ತಾರೆ. ಈ ವ್ಯವಹಾರವನ್ನು ನಾನು ಯಾವುದೆ ಚಕ್ ಮೂಲಕ ವ್ಯವಹರಿಸಿರುವುದಿಲ್ಲ. ಐಟಿ ರಿಟರ್ನ್ಸ್ ಫೈಲ್ ಮಾಡಿದಾಗ ರೈತರಿಗೆ ಹಣ ಕೊಟ್ಟ ಬಗ್ಗೆ ಕಾಣಿಸಿರುವುದಿಲ್ಲ, ಸಾಕ್ಷಿ ಪುನಃ ಹಾಗೆ ಹಣ ಕೊಟ್ಟ ಬಗ್ಗೆ ಪ್ರತ್ಯೇಕವಾಗಿ ಕಾಣಿಸಲು ಆಗುವುದಿಲ್ಲ ಎನ್ನುತ್ತಾರೆ. ರೈತರಿಗೆ ಒಂದು ವೇಳೆ ಹಣ ಕೊಟ್ಟಿದ್ದರೆ ಐಟಿ ರಿಟರ್ನ್ಸ್ ತೋರಿಸಲಾಗುತ್ತಿತ್ತು ಆದರೆ ಹಾಗೆ ಹಣ ಕೊಡದೆ ಇದ್ದ ಕಾರಣ ತೋರಿಸಿಲ್ಲ ಎಂದರೆ ಸಾಕ್ಷಿ ರಿಟರ್ನ್ಸ್ ನಲ್ಲಿ ಅಡ್ವಾನ್ ಎಂದು ತೋರಿಸಲಾಗಿದೆ ಎನ್ನುತ್ತಾರೆ. ನಾನು 7 ರಿಂದ 12 ನೇ ಪ್ರತಿವಾದಿಗಳಿಗೆ ಯಾವುದೆ ಹಣ ಕೊಡದೆ ಇದ್ದರೂ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ನೆ ಸಾಲಿನಲ್ಲಿ 7 ರಿಂದ 12 ನೇ ಪ್ರತಿವಾದಿಗಳ ಹೆಸರಿನಲ್ಲಿ ಯಾವುದೆ ಖಾತೆಗಳು ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ, ಆದರೆ ಆ ಬಗ್ಗೆ ಅಗ್ರಿಮೆಂಟ್ ನಲ್ಲಿ ನಮೂದು ಮಾಡಲಾಗಿದೆ ಎಂದು ನುಡಿಯುತ್ತಾರೆ. ಮುಂದುವರೆದ ಕರಾರು ಪತ್ರಗಳಾದ ನಿಪಿ. 2 ರಿಂದ 4 ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.